- -

ಓ. ಎಸ್ 147/2014
ಪಿ. ಡಬ್ಲ್ಯೂ- 5

**ದಿನಾಂಕಃ 15-04-2021 ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಬಿ.ಆರ್.ಆರ್ ವಕೀಲರಿಂದಃ**

ನನ್ನ ಲೈಸನ್ಸ್ ನಂಬರ್ 54/2009-10. ಲೈಸನ್ಸ್ ನಂಬರ್ ನ್ನು ನಿಪಿ--1 ರಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನನಗೆ ಮಾಹಿತಿಯನ್ನು ವಾದಿಯವರು ನೀಡಿರುತ್ತಾರೆ. ನನ್ನ ಪ್ರಮಾಣಪತ್ರದಲ್ಲಿ ವಾದಿಯವರು ಮಾಹಿತಿ ನೀಡಿರುವಂತೆ ಬರೆಸಿದ್ದೇನೆಂದು ಹೇಳಿರದೇ ನಾನೇ ಹೇಳಿ ಬೆರಳಚ್ಚು ಮಾಡಿಸಿರುವುದಾಗಿ ಹೇಳಿದ್ದೇನೆ ಎಂದರೆ ಸಾಕ್ಷಿಯು ನನಗೆ ಮರೆತುಹೋಗಿದೆ ಎಂದು, ಮುಂದುವರೆದು ಸದರಿ ವಾದಿಯವರು ಪಹಣಿಯನ್ನು ಕೊಟ್ಟು ಕರಾರುಪತ್ರ ಬರೆದುಕೊಡುವಂತೆ ಹೇಳಿದ್ದನ್ನು ನಾನು ಬರೆದಿರುತ್ತೇನೆ ಎನ್ನುತ್ತಾರೆ. ನನಗೆ ಸಾಕ್ಷಿದಾರರುಗಳ ಹೆಸರು ಮತ್ತು ವಿಳಾಸ ಗೊತ್ತಿರುವುದಿಲ್ಲ, ಸಾಕ್ಷಿ ಮುಂದುವರೆದು ವಯಸ್ಸಾಗಿರುವುದರಿಂದ ಮರೆತು ಹೋಗಿದೆ ಎನ್ನುತ್ತಾರೆ. ನಿಪಿ-1 ಲ್ಲಿ ಸಾಕ್ಷಿದಾರರ ವಿಳಾಸ ಮತ್ತು ತಂದೆ ಹೆಸರು ನಮೂದಿಸಿಲ್ಲ ಎಂದರೆ ಸರಿ. ನನ್ನ ಪ್ರಮಾಣಪತ್ರದಲ್ಲಿ ಸಾಕ್ಷಿದಾರರ ಹೆಸರು ಮತ್ತು ವಿಳಾಸವನ್ನು ನಮ್ಮ ವಕೀಲರು ಬರೆದಿರುತ್ತಾರೆ. ನನ್ನ ಪ್ರಮಾಣಪತ್ರದಲ್ಲಿನ ಮಾಹಿತಿಯು ಅಲ್ಪಸ್ವಲ್ಪ ಗೊತ್ತಿದೆ. ನನ್ನ ವೃತ್ತಿ ಜೀವನದಲ್ಲಿ ಯಾವುದೇ ಪತ್ರ ಬರವಣಿಗೆಯಲ್ಲಿ ಆದ ತಪ್ಪುಗಳು ತಿದ್ದುಪಡಿ ಮಾಡಿ ನಮೂದು ಮಾಡುತ್ತೇನೆ. ನಿಪಿ-1 ರ ಕರಾರುಪತ್ರದಲ್ಲಿ ಬರೆಸಿಕೊಂಡವರು ಎಂಬ ಪದದಲ್ಲಿ ತಿದ್ದುಪಡಿಯಾಗಿದ್ದು, ಸದರಿಯನ್ನು ಸರಿಪಡಿಸಿದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಬರೆಸಿಕೊಂಡವರು ಎಂಬ ಪದವನ್ನು ತಿದ್ದುಪಡಿ ಮಾಡಿರುವ ಕೈ ಬರವಣಿಗೆ ಯಾರದು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 10 ವರ್ಷದ ಹಿಂದೆ ಆಗಿರುವುದರಿಂದ ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ. ನಿಪಿ-1 ನ್ನು ಬರೆಯಲು ಪಹಣಿಯನ್ನು ನೀಡಿದ್ದು, ಅದರೊಂದಿಗೆ ಹೆಸರು ವಿಳಾಸವನ್ನು ನೀಡಿದ್ದರು. ನಿಪಿ-1 ರಲ್ಲಿ ಮುಂಗಡ ಒಂದು ಲಕ್ಷವನ್ನು ಯಾರು ಯಾರಿಗೆ ನೀಡಿದ್ದಾರೆಂದು ಬರೆದಿಲ್ಲ ಎಂದರೆ ಸರಿ. ನಾನು ಸಾಮಾನ್ಯವಾಗಿ ಕರಾರುಪತ್ರದಲ್ಲಿ ಮಾರುವವರು ಒಬ್ಬರಿಗಿಂತ ಹೆಚ್ಚು ಜನರು ಇದ್ದಲ್ಲಿ ಯಾರಿಗೆ ಹಣ ಸಂದಾಯವಾಗಿದೆ ಎಂದು ನಿರ್ದಿಷ್ಟವಾಗಿ ಹೆಸರನ್ನು ನಮೂದಿಸುತ್ತೇನೆಂದರೆ ಸರಿ. ನಾನು ಕರಾರುಪತ್ರದಲ್ಲಿ ಮುನ್ಸಿಫಲ್ ಖಾತಾ ಸಂಖ್ಯೆಯನ್ನು ಹಾಕಿದ್ದು, ಆದರೆ ಸರ್ವೆ ನಂಬರ್ ನ್ನು ನಮೂದಿಸಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಸಾಕ್ಷಿದಾರರು ನನ್ನ ಸಮ್ಮುಖ ಸಹಿ ಮಾಡಿರುತ್ತಾರೆ. ಸದರಿಯವರು ವಾದಿಯವರ ಸಂಬಂಧಿಕರಾಗಿರುತ್ತಾರೆ. ಕರಾರುಪತ್ರ ಬರೆಸಿಕೊಟ್ಟವರು ಎಂಬ ಸ್ಥಳದಲ್ಲಿ ಸಹಿಯನ್ನು ಪಡೆದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪಕ್ಕದಲ್ಲಿ ಸಹಿ ಮಾಡಿರುತ್ತಾರೆ.

ನಿಪಿ-1 ನ್ನು ವಾದಿ ಮತ್ತು ಪ್ರತಿವಾದಿಗಳ ಸಮಕ್ಷಮ ಅವರ ಮಾಹಿತಿಯ ಮೇರೆಗೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ಸಾಮಾನ್ಯವಾಗಿ ಮುದ್ರಾಂಕ ಪತ್ರ ಪಕ್ಷಗಾರರು ನೀಡಿದ ಮುದ್ರಾಂಕ ಪತ್ರದಲ್ಲಿ ಬರೆಯುತ್ತೇನೆ. ನಿಪಿ-1 ರಲ್ಲಿ ಆಗಲೀ ಅಥವಾ ಪಹಣಿಯಲ್ಲಿ ಆಗಲೀ ಗಂಗಾಧರಯ್ಯ ಎಂಬುವವರ ಹೆಸರು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅವರು ಹೇಳಿದ್ದನ್ನು ನಾನು ಬರೆದಿರುತ್ತೇನೆ ಎನ್ನುತ್ತಾರೆ. ಪ್ರತಿವಾದಿ ಮತ್ತು ಆಕೆಯ ಗಂಡ ಗಂಗಾಧರಯ್ಯನವರ ಅನುಪಸ್ಥಿತಿಯಲ್ಲಿ ವಾದಿ ಮತ್ತು ಸಾಕ್ಷಿದಾರರು ಮತ್ತು ನಾನು ಶಾಮೀಲಾಗಿ ನಿಪಿ-1 ನ್ನು ಸೃಷ್ಟಿ ಮಾಡಿದ್ದೇವೆಂದರೆ ಸರಿಯಲ್ಲ. ನನ್ನ ಸಮಕ್ಷಮ ಪ್ರತಿವಾದಿಯಾಗಲೀ ಆಕೆಯ ಗಂಡ ಗಂಗಾಧರನಾಗಲೀ ಯಾವುದೇ ಪತ್ರಕ್ಕೆ ಸಹಿ ಮಾಡಿಲ್ಲ, ಮುಂಗಡ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಮತ್ತು ಆಕೆಯ ಗಂಡನ ಸಹಿ ನಿಪಿ-1 ರಲ್ಲಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ಕಬಳಿಸಬೇಕೆಂದು ನಿಪಿ-1 ನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ನಿಯಮಾಬದ್ಧವಾಗಿ ನಿಪಿ-1 ರ ಕರಾರು ಬರೆದಿದ್ದಲ್ಲಿ ತಿದ್ದುಪಡಿಗಳನ್ನು ನಮೂದಿಸುತ್ತಿದ್ದು ಮತ್ತು ದಾಖಲೆಗಳನ್ನು ಪರಿಶೀಲಿಸುತ್ತಿದ್ದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ:**

(ಉಖ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒಪ್ಪಿದ್ದಾರೆ,

2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪ್ಪಾಗಡಿ.